ಕಥೆ

# ತಿರುವಿನಾಚೆಯ ಮನೆ

■ **ಕಾರ್ತಿಕ್ ಆರ್.**
ಕಲೆ: ಪ್ರಭಾಕರ್ ಹೆಗಡೆ

ಇಪ್ಪತ್ತು ವರ್ಷಗಳ ನಂತರ ಊರಿಗೆ ಹೋಗಿ ಬರುವ ಉಮೇದಿನಲ್ಲಿದ್ದ ಅನಂತುವಿಗೆ, ಊರಿನಲ್ಲಿದ್ದ ತನ್ನ ಹುಟ್ಟಿದ ಮನೆ ಕೆಡವಿ, ಅಲ್ಲೊಂದು ಹೊಸ ಮನೆ ಕಟ್ಟಿದ್ದಾರೆಂಬ ಸಂಗತಿ ತಿಳಿದಾಗ ಹೇಳಿಕೊಳ್ಳಲಾಗದ ವೇದನೆಯಾಯಿತು. ಆನಂತರ ಅವನ ಬುದ್ಧಿ ಮತ್ತು ಯೋಚನೆಗಳಿಗೆ ಕವಿದಿದ್ದ ಮಂಕು ಇನ್ನೂ ಇಳಿದಿರಲ್ಲಿಲ್ಲ. ತನಗೆ ಸಂಕಟವಾಗುತ್ತಿರುವುದು ತನ್ನ ಮನೆ ಇಲ್ಲವೆಂಬ ಕಾರಣಕ್ಕೋ, ಅಥವಾ ಅಷ್ಟು ದಿನದಿಂದ ಮಾಡಿಕೊಂಡಿದ್ದ ಊರು ನೋಡುವ ಯೋಚನೆಗೆ ಆ ಸುದ್ದಿಯಿಂದ ಹಿನ್ನಡೆ ಉಂಟಾಯಿತು ಎಂಬ ಕಾರಣಕ್ಕೋ ಎಂಬುದು ಅವನಿಗೂ ತಿಳಿಯಲಿಲ್ಲ. ಊರು, ಮನೆ, ಹಳೆ ನೆನಪು ಎಂದೆಲ್ಲ ಏನೇನೋ ಬಡಬಡಿಸುತ್ತಿದ್ದವನಿಗೆ, ಹೊರಡುವ ಎರಡು ದಿನಕ್ಕೆ ಮೊದಲು ಅಮ್ಮ, 'ಹೋಗೋದಾದರೆ ಹೋಗು, ಆದರೆ ಅಲ್ಲಿ ಹೋಗಿ ನೋಡೋದಕ್ಕೆ, ಮಾಡೋದಕ್ಕೆ ಎಂತದೂ ಇಲ್ಲ ಮಾರಾಯ! ಹಳೇ ಮನೆ ಬೀಳಿಸಿ ಮೂರು ಮಾಡಿಯ ಮನೆ ಕಟ್ಟಿದ್ದಾರಂತೆ, ಎರಡು ವರ್ಷ ಹಿಂದೆ' ಎಂದಾಗ ತಕ್ಷಣಕ್ಕೆ ಆಘಾತ ಆಶ್ಚರ್ಯಗಳೆರಡೂ ಆಗಿತ್ತಾದರೂ, ಸ್ವಲ್ಪ ಹೊತ್ತು ಕಳೆದ ಮೇಲೆ, ಸಂಕಟದ ಜಾಗೆಯಲ್ಲಿ ವಿಲಕ್ಷಣ ಉದಾಸೀನವೊಂದು ಕವಿದುಕೊಂಡಿತ್ತು. 'ಅಲ್ಲಾ! ನಾನು ಇಷ್ಟು ದಿನ ಊರಿಗೆ ಹೋಗ್ತೀನಿ, ಮನೆ ನೋಡ್ತೀನಿ ಎಂದೆಲ್ಲ ಬಡಕೊಳ್ಳುತ್ತಿದಾಗಲಾದ್ರೂ ಹೇಳಿ ಸಾಯಬಾರದಿತ್ತೇನೇ?'' ಎಂದೊಮ್ಮೆ ಹೇಳಿದ್ದು ಬಿಟ್ಟರೆ ಮತ್ತೆ ಅದರ ಬಗ್ಗೆ ಅಮ್ಮನೊಡನೆ ಮಾತನಾಡಿರಲಿಲ್ಲ. ಆದರೂ ಆ ನಿಮಿಷದಿಂದ ತಾನು ತಾನಾಗಿರಲು ಆಗುತ್ತಿಲ್ಲವೆಂಬುದು ಅವನ ಅರಿವಿಗೆ ಬಂತು.

ಮೂವತ್ತೆರಡು ವರ್ಷ ವಯಸ್ಸಿನ, ಬ್ಯಾಂಕೊಂದರಲ್ಲಿ ನೌಕರಿ ಮಾಡುವ ಅನಂತು, ಬದುಕಿನ ಕಳೆದ ಇಪ್ಪತ್ತು ವರ್ಷಗಳನ್ನು ತಾನು ಹುಟ್ಟಿದೂರಿನಿಂದ ಹೊರಗೆ ಕಳೆದಿದ್ದಾನೆ. ಈ ಇಪ್ಪತ್ತು ವರ್ಷಗಳಲ್ಲಿ ಹಲವಾರು ಊರುಗಳನ್ನು ಬದಲಾಯಿಸಿದ್ದಾನೆ ಮತ್ತು ಪ್ರತೀ ಬಾರಿ ಊರು ಬದಲಾಯಿಸಿದಾಗಲೂ ತನ್ನ ಹುಟ್ಟಿದೂರಿನಿಂದ ಒಂದೊಂದೇ ಹೆಜ್ಜೆ ದೂರ ಹೋಗುತ್ತಿರುವ ಭಾವದಲ್ಲಿ ಒದ್ದಾಡಿದ್ದಾನೆ. ತನ್ನ ಈವರೆಗಿನ ಬದುಕಿನ ಮುಕ್ಕಾಲರಷ್ಟನ್ನು ಬೇರೆ ಬೇರೆ ಊರುಗಳಲ್ಲಿ ಕಳೆದಿದ್ದ ಅನಂತು, ತನ್ನ ಊರಿಗೆ ಸಂಬಂಧಿಸಿದ ಏನೋ ಒಂದು ತನ್ನೊಳಗೆ ಈಗಲೂ ಹಾಗೇ ಉಳಿದುಕೊಂಡಿದೆ ಎಂದು ನಂಬಿಕೊಂಡಿದ್ದ. ಏನೇನೋ ಸಕಾರಣ ಮತ್ತು ಅಕಾರಣ ವಿಚಾರಗಳು ಒಟ್ಟುಗೂಡಿ ಮನೆ ಮಾರಿ ಊರು ಬಿಟ್ಟಿದ್ದ ಅನಂತುವಿನ ಕುಟುಂಬ ಹಲವು ಊರುಗಳನ್ನು ಹಾದು ಕಡೆಗೆ ಈ ಮಹಾನಗರದಲ್ಲಿ ನೆಲೆ ನಿಲ್ಲುವಷ್ಟರಲ್ಲಿ ತಾವು ಯಾವ ಊರಿನವರು ಎಂಬ ಪ್ರಶ್ನೆಯನ್ನು ಸಾಕಷ್ಟು ಬಾರಿ ಎದುರಿಸಿದೆ. ಹೊಸತರಲ್ಲಿ ಮನೆಯವರೆಲ್ಲ ಸಹಜವಾಗಿ ಬಿಟ್ಟೂರಿನ ಹೆಸರನ್ನು ಹೇಳುತ್ತಿದ್ದರು, ಆದರೆ ಕಾಲ ಕಳೆದಂತೆ ತಾವು ಆ ಊರಿನವರು ಎಂದು ಹೇಳಿದಾಗ, ಪ್ರಶ್ನೆ ಕೇಳಿದವರು 'ಓ ಅಲ್ಲಿ ಯಾರ ಮನೆ', 'ಅಲ್ಲಿ ಕಾಮತರದೊಂದು ಹೊಟೇಲಾಗಿದೆ ಗೊತ್ತಲ್ಲ', 'ಹಾ, ಈ ಸಾರಿ ಕಾಫಿ ರೇಟಿಲ್ಲಂತಲ್ಲ ಛೇ' ಎಂದೆಲ್ಲ ಮಾತನಾಡಿ, ಮನೆಯವರಿಗೆ ಆ ಊರಿನಲ್ಲಿ ಹೊಸತಾಗಿ ನಡೆಯುವ ವಿಚಾರಗಳೆಲ್ಲ ತಮಗೆ ತಿಳಿದಿಲ್ಲವೆಂದು ಮುಜುಗರವಾಗುತ್ತಿತ್ತು. ಆಗ 'ಇಲ್ಲಾ, ನಾವು ಆ ಊರು ಬಿಟ್ಟು ತುಂಬ ಸಮಯವಾಯ್ತು' ಎಂದಾಗ ಎದುರಿನವರಿಗೆ ರಸಭಂಗದಂಥದ್ದೇನೋ ಆಗಿ ಅವರಲ್ಲಿ 'ಓ... ಹಾಗಾ' ಎಂಬ ಮುಖ ಭಾವ ಮೂಡಿದಾಗ ರೇಜಿಗೆಯಾಗುತ್ತಿತ್ತು. ಕಾಲ ಕಳೆದಂತೆ ಅಂತಹ ಪ್ರಶ್ನೆಗಳಿಗೆ ಹಾರಿಕೆಯ ಉತ್ತರ ಕೊಟ್ಟು ಮಾತು ಮರೆಸಿಬಿಡುವ ವಿದ್ಯೆ ಮನೆಯವರಿಗೆಲ್ಲಾ ಸಾಮೂಹಿಕವಾಗಿ ಸಿದ್ಧಿಸಿದೆ. ಕಾಲದ ಸಳೆವು ಮತ್ತು ಬದುಕಿನೊಂದಿಗೆ ಸೋವಿಯಾಗಿ ದೊರಕುವ ಅಸಂಖ್ಯ ಸಿಕ್ಕುಗಳಿಂದ ಬಿಡಿಸಿಕೊಳ್ಳುವಷ್ಟರಲ್ಲಿ ಊರು ಮನೆಯ ಅವೆಷ್ಟೋ ನೆನಪುಗಳು ಇಷ್ಟಿಷ್ಟೇ ಮಾಸುತ್ತ ಕಡೆಗೊಮ್ಮೆ ಬರಿಯ ಪರಿಚಯವಿರುವ ಆದರೆ ಆಕಾರವಿಲ್ಲದ ಅಸ್ಪಷ್ಟ ಗುರುತುಗಳಂತೆ ಉಳಿದುಬಿಟ್ಟಿವೆ.

ಮೊದಮೊದಲು ಯಾರದೋ ಮದುವೆಗೋ, ಯಾವುದೋ ಸರ್ಟಿಫಿಕೇಟಿಗೋ, ಮತ್ತಾರೋ ಕರೆದರೆಂದೋ ಊರಿಗೆ ಹೋಗಿ ಬರುವ ಪ್ರಮೇಯವಾದರೂ ಇರುತ್ತಿತ್ತು. ಆದರೆ ವರ್ಷಗಳುರುಳಿದಂತೆ ಅಂತ ನೆಪಗಳೂ ಇಲ್ಲವಾಗಿ ತಾನು ಹುಟ್ಟಿದ, ಬೆಳೆದ, ಎಂದಿಗೂ ಇಲ್ಲೇ ಇರುತ್ತೇನೆಂದುಕೊಂಡಿದ್ದ ಊರು, ಮುಂಜಾವಿನ ಸಕ್ಕರೆ ನಿದ್ದೆಯಲ್ಲಿ ಬಿದ್ದು ಸವಿಯಾದ ಎಂಥದೋ ಭಾಸವನ್ನಷ್ಟೇ ಉಳಿಸಿಹೋಗುವ ಅಕಾರಣ ಕನಸಾಗಿಯಷ್ಟೇ ಉಳಿದುಕೊಂಡಿತ್ತು. ಇಷ್ಟಾದರೂ,

